**OS No.31/2023**
**PW-1**

(ದಿನಾಂಕ 02.08.2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು).
ಸಾಕ್ಷಿಗೆ ಕನ್ನಡ ಬರುವುದಿಲ್ಲ ಟ್ರಾನ್ಸ್‌ಲೇಟರ ಆಗಿ ಶ್ರೀಮತಿ ಚಂದ್ರಕಲಾ ವಕೀಲರನ್ನು ನೇಮಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಜಿ.ಎ.ಜಿ ಪ್ರತಿವಾದಿಯರ ಪರ ವಕೀಲರಿಂದ

ಈ ಪ್ರಕರಣದ ದಾಖಲಿಸುವ ಮುಂಚೆ ನಾನು ನೊಟೀಸ ನೀಡಿರುತ್ತೇನೆ. ನಿಪಿ-10 ರಲ್ಲಿ ನನಗೆ ಬರಬೇಕಾದ 3 ಗುಂಟೆ ಜಮೀನನ್ನು ಕೊಡದೇ ಇದ್ದರೆ ನಾನು ದಾವಾ ಸಲ್ಲಿಸುತ್ತೇನೆ ಅಂತ ನಮೂದು ಆಗಿದೆ ಎಂದರೆ ಸರಿ. ಸದರಿ 3 ಗುಂಟೆ ಜಮೀನು ಉತ್ತರಕ್ಕೆ ಬರುತ್ತದೆ. ದಾವೆ ಸಲ್ಲಿಸುವ ಮುಂಚೆ ನಾನು ಯಾವುದೇ ದಾವಾ ಸ್ವತ್ತಿಗೆ ಸಂಬಂದಪಟ್ಟಹಾಗೆ ನಾನು ಸರ್ವೆ ಮಾಡಿಸಿರುವುದಿಲ್ಲ, 3 ಗುಂಟೆ ಜಮೀನು ನನಗೆ ಸೇರಿದೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಗೆ ನನಗೆ 5 ಎಕರೆ ಸೇರಿದೆ ಎಂದು ನುಡಿಯತ್ತಾರೆ. ಈ ದಾವೆಯನ್ನು ನಾನು ನನಗೆ ಸೇರಿದ 5 ಎಕರೆಯಲ್ಲಿ 3 ಗುಂಟೆ ಜಮೀನನ್ನು ಕಡಿಮೆ ಆಗಿದೆ ಎಂದು ಸಲ್ಲಿಸಿದ್ದೇನೆ. ನನಗೆ ಸೇರಿದ 5 ಎಕರೆ ಜಮೀನು ನನಗೆ ಸೇರಿದ್ದು 5 ಎಕರೆ ನನಗೆ ಇರುತ್ತದೆ ಆ ರೀತಿ ಯಾವುದೇ ರೀತಿಯಾದ ಸರ್ವೆ ಮಾಡಿಸದೇ 3 ಗುಂಟೆ ಕಡಿಮೆ ಬಂದಿದೆ ಎಂದು ನಾನು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮನೆಯನ್ನು ವೆಂಕಟರತ್ನಮ್ಮ ಅವರು ಕಟ್ಟಿರುತ್ತಾರೆ. ಸದರಿ ಮನೆ ಕಟ್ಟುವುದು ಮುಗಿದು ದಿನಾಂಕ 17-02-2024 ಮನೆಯ ಒಪನಿಂಗ ಆಗಿರುತ್ತದೆ ಎಂದರೆ ಸರಿ , ಸಾಕ್ಷಿ ಮುಂದುವರೆವದು ಮನೆ ಕಟ್ಟಿವ ಮುಂಚಿನ ಈ ಪ್ರಕರಣದ ದಾಖಸಿದ್ದೇನೆಂದು ನುಡಿಯತ್ತಾರೆ.

ನಮ್ಮ ಹೊಲ ಮತ್ತು ಅವರ ಮನೆ ನಡುವೆ ದಾರಿ ನಾನು ಖರೀದಿ ಮಾಡಿದಾಗಿನಿಂದ ಇದೆ ಎಂದು ನುಡಿಯತ್ತಾರೆ, ಸಾಕ್ಷಿ ಮುಂದುವರೆದು ದಾರಿ ಇರುವುರಿಂದ ನಾನು ಖರೀದಿ ಮಾಡಿರುತ್ತೇನೆ. ನನ್ನ ಖರೀದಿ ಪತ್ರದಲ್ಲಿ ಖರೀದಿ ಕಾಲಕ್ಕೆ ಸದರಿ ದಾರಿ ಬಗ್ಗೆ ಚಕಬಂದಿ ತೋರಿಸಿದ್ದು , ಸದರಿ ರಸ್ತೆಯ ಪೂರ್ವಕ್ಕೆ ಇರುತ್ತದೆ. ನಾನು ಖರೀದಿ ಮಾಡಿದ ಕಾಲಕ್ಕೆ ಅಲ್ಲಿ ದಾರಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಖರೀದಿಪತ್ರದಲ್ಲಿ ಪೂರ್ವ ದಿಕ್ಕಿಗೆ ರಸ್ತೆ ಇದೆ ಎನ್ನುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಶ್ರೀನಿವಾಸ ರವರು ನನ್ನ ಸಹೋದರ ನನ್ನ ತಮ್ಮ. ಶ್ರೀನಿವಾಸ ಅವರಿಗೆ ಮತ್ತು ಪ್ರತಿವಾದಿಯರಿಗೆ ವೈಮನಸ್ಸು ಇರುವುದರಿಂದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ನಮ್ಮ ಜೊತೆಗೆ ಇಲ್ಲ ಅವರ ಜೊತೆಗೆ ವೈಮನಸ್ಸು ಇದೆ ಎಂದು ನುಡಿಯತ್ತಾರೆ. ನನಗೆ ಯಾವುದೇ ವಿಷಯ ಗೊತ್ತಿರದಿದ್ದರೂ ಕೂಡ ಶ್ರೀನಿವಾಸ ನನ್ನ ಹತ್ತಿರ ಜಿಪಿಎ ತೆಗದುಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ . ಯಾವುದೇ ರೀತಿ ಒತ್ತುವರಿ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ

ತಡೆಯಾಜ್ಞೆ ಕೋರಿ ಸಲ್ಲಿಸಿದ ಪ್ರಕರಣದಲ್ಲಿಯ ಮಧ್ಯಂತರ ಅರ್ಜಿ ನನ್ನ ವಿರುದ್ಧ ಆಗಿದ್ದು , ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಅದು ಕೂಡ ವಜಾ ಆಗಿದ್ದು , ಆದ್ದರಿಂದ ಈ ಪ್ರಕರಣ ಚಾಲ್ತಿಯಲ್ಲಿರುವಾಗಲೇ ಪ್ರತಿವಾದಿ-1 ಮನೆ ಕಟ್ಟಿ ಮುಗಿಸಿರುತ್ತಾರೆ ಎಂದರೆ ಸರಿ. ಸದರಿ ಯಾವುದೇ ರೀತಿಯ ಪ್ರತಿವಾದಿ ಒತ್ತುವರಿ ಮಾಡದೇ ಇರುವುದರಿಂದ ಸದರಿ ತಡೆಯಾಜ್ಞೆ ವಜಾಗೊಂಡಿದ್ದು ಆದ್ದರಿಂದ ಅವರು ಮನೆ ಕಟ್ಟಿದ್ದು ಇರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಜಾಗೆಯಲ್ಲಿ ಮನೆ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ</u>.

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

ಪ್ರ.ದ.ನ್ಯಾ.ದಂ.ಗಳು, ಮಾನ್ವಿ